# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 630
**ಮಾನ್ಯ ಸದಸ್ಯರ ಹೆಸರು** : ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿರುವವರು)
**ಉತ್ತರಿಸಬೇಕಾದ ದಿನಾಂಕ** : 19-09-2022
**ಉತ್ತರಿಸುವ ಸಚಿವರು** : ಪ್ರವಾಸೋದ್ಯಮ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಬೀದರ್, ಕಲಬುರಗಿ, ವಿಜಯಪುರ ಮುಂತಾದ ಜಿಲ್ಲೆಗಳಲ್ಲಿ ಬಹುಮನಿ ಸುಲ್ತಾನರ ಕಾಲದಲ್ಲಿ ಕೊರೆಯಲಾದ ಕರೇಜ್ ಸುರಂಗ ಬಾವಿಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಜ್ಯದ ಬೀದರ್ ಮತ್ತು ವಿಜಯಪುರ ನಗರಗಳಲ್ಲಿ ಬಹಮನಿ ಸುಲ್ತಾನರ ಕಾಲದಲ್ಲಿ ಕೊರೆಯಲಾದ ಕರೇಜ್ ಸುರಂಗ ಬಾವಿಗಳು ಇರುವುದು ಸರ್ಕಾರಕ್ಕೆ ಗಮನಕ್ಕೆ ಬಂದಿದೆ. ಆದರೆ, ಕಲಬುರಗಿ ಜಿಲ್ಲೆಯಲ್ಲಿ ಕರೇಜ್ ಸುರಂಗ ಬಾವಿಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |
| ಆ) | ಹಾಗಿದ್ದಲ್ಲಿ, ಈ ಬಗ್ಗೆ ಸಂಶೋಧನೆ ಮತ್ತು ಅಧ್ಯಯನ ನಡೆಸಲಾಗಿದೆಯೇ; ಈ ಸಂಶೋಧನೆ ಮತ್ತು ಅಧ್ಯಯನದಿಂದ ಹೊರಬಂದಿರುವ ಮಹತ್ವದ ಅಂಶಗಳೇನು; (ಪೂರ್ಣ ವಿವರ ನೀಡುವುದು) | **ಬೀದರ್ ಕರೇಜ್:** ಬೀದರ್ ನಗರದ ವ್ಯಾಪ್ತಿಯಲ್ಲಿ ಬರುವ ಶಿಕಾರಗ ಮತ್ತು ಕರೇಜ್ ಪುನರುತ್ಥಾನ, ಕರೇಜ್‌ದಲ್ಲಿ ಹೂಳು ತೆಗೆಯುವುದು, ಸುತ್ತುಗೋಡೆ, ನೀರು ಶುದ್ಧೀಕರಣ, ಕಿಂಡಿಗಳ ಸಂರಕ್ಷಣೆ, ಪ್ರವಾಸಿಗರಿಗೆ ಮೂಲಭೂತ ಸೌಕರ್ಯ ಹಾಗೂ ಉದ್ಯಾನವನ ಕಾಮಗಾರಿಯನ್ನು ಇಂಡಿಯನ್ ಹೆರಿಟೇಜ್ ಸಿಟೀಸ್ ನೆಟ್ ವರ್ಕ್ ಫೌಂಡೇಶನ್‌ರವರ ಮುಖಾಂತರ ಸಂಶೋಧನೆ ಮತ್ತು ಅಧ್ಯಯನ ನಡೆಸಲಾಗಿರುತ್ತದೆ.<br><br>ಸದರಿ ವರದಿಯಲ್ಲಿ, ಬೀದರ್ ನಗರದ ನೌಬಾದ್ ಪ್ರಾಂತ್ಯದಲ್ಲಿರುವ ಕರೇಜ್ ವ್ಯವಸ್ಥೆಯು ಸುಮಾರು 500 ವರ್ಷಗಳಿಗಿಂತಲೂ ಹಳೆಯದಾಗಿದೆ. ಕರೇಜ್ ತಂತ್ರಜ್ಞಾನವು ಮೂಲತಃ ನೆಲದ ನೀರಿನ ಮೂಲಗಳಿಗೆ (ಅಥವಾ ನೈಸರ್ಗಿಕ ಬುಗ್ಗೆಗಳು) ಟ್ಯಾಪ್ ಮಾಡಿ, ಭೂಗರ್ಭದ ಸುರಂಗಮಾರ್ಗವನ್ನು ವಸಾಹತು ಪ್ರದೇಶಕ್ಕೆ ಸಾಗಿಸುತ್ತದೆ. ಇಂತಹ ವ್ಯವಸ್ಥೆಗಳು ಸಧ್ಯಕ್ಕೆ ಇರಾನ್ ದೇಶದಲ್ಲಿದ್ದು ಭಾರತ ದೇಶದಲ್ಲಿ ಕೆಲವೇ ಕೆಲವು ರಾಜ್ಯಗಳಲ್ಲಿ ಈ ತರಹದ ಸುರಂಗ ಬಾವಿಗಳನ್ನು ನೋಡಬಹುದು. ಅದರಲ್ಲಿ ಕರ್ನಾಟಕದ ಬೀದರ್ ನಗರದಲ್ಲಿ ಇರುವುದು ವಿಶಿಷ್ಟವಾಗಿದೆ. ಕರೇಜ್ ವ್ಯವಸ್ಥೆಯನ್ನು ಕರ್ನಾಟಕದ ಬೀದರ್‌ನಲ್ಲಿ ಬಹುಮನಿ ರಾಜರು 15ನೇ ಶತಮಾನದಲ್ಲಿ ನಿರ್ಮಿಸಿದರು. ಕರೇಜ್ ಭೂಗತ ನೀರಿನ ಹೊಳೆಗಳಿಗೆ ನಿರ್ಮಿಸಲ್ಪಟ್ಟ ನೆಲದಡಿ ಕಾಲುವೆಗಳು ಮಾತ್ರವಲ್ಲ, ನಾಗರೀಕ ನೆಲೆಗಳಿಗೆ ಕುಡಿಯುವ ನೀರನ್ನು ಒದಗಿಸುತ್ತವೆ.<br><br>**ವಿಜಯಪುರ ಕರೇಜ್ :** ವಿಜಯಪುರ ನಗರದಲ್ಲಿ ಕಂಡು ಬಂದಿರುವ ಆದಿಲ್ ಶಾಹಿ ಸುಲ್ತಾನರ ಆಳ್ವಿಕೆಯ ಕಾಲದಲ್ಲಿ ನಿರ್ಮಾಣಗೊಂಡಿರುವ ಪುರಾತನ ನೀರು ಸರಬರಾಜು ಸುರಂಗ ಸಂಪರ್ಕಿಸುವ ಮಾರ್ಗ (ಕರೇಜ್) ಉತ್ತಮ ಗುಣಮಟ್ಟದ ನೌಬಾದ್ ಕರೇಜ್‌ನ ಉದ್ದ ಸುಮಾರು 3-5 ಕಿ.ಮೀರಷ್ಟು ವಿಸ್ತೀರ್ಣವಾಗಿದ್ದು ಪ್ರಸ್ತುತ ಸುಮಾರು 500 ಮೀಟರ್ ನಷ್ಟು ಪ್ರಾಚೀನ ಕಾಲದ ನೀರು ಸರಬರಾಜು (ಕರೇಜ್) ಸೌಲಭ್ಯವನ್ನು ನವೀಕರಿಸಿ ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿರುತ್ತದೆ. |

| | | |
|---|---|---|
| ಇ) | ರಾಜ್ಯದಲ್ಲಿರುವ ಪುರಾತತ್ವ ಮತ್ತು ಐತಿಹಾಸಿಕ ಮಹತ್ವವುಳ್ಳ ಈ ಕರೇಜ್ ಗಳನ್ನು ಪುನರ್ ಜೀವನಗೊಳಿಸಲು ರಾಜ್ಯ ಸರ್ಕಾರ ರೂಪಿಸಿರುವ ಕಾರ್ಯಕ್ರಮಗಳು ಮತ್ತು ಯೋಜನೆಗಳು ಯಾವುವು; ಈ ಯೋಜನೆ ಅಡಿ ಒದಗಿಸಲಾದ ಅನುದಾನವೆಷ್ಟು? (ಆರ್ಥಿಕ ಮತ್ತು ಭೌತಿಕ ಗುರಿ ಮತ್ತು ಸಾಧನೆ ಒಳಗೊಂಡಂತೆ ಪೂರ್ಣ ವಿವರ ನೀಡುವುದು) | **ಬೀದರ್ ಕರೇಜ್:** ಸದರಿ ಕಾಮಗಾರಿಯನ್ನು ರೂ.270.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಸರ್ಕಾರದ ಆದೇಶ ಸಂಖ್ಯೆ: ಪ್ರಇ 176 ಪ್ರವಾಯೋ 2017, ದಿನಾಂಕ: 29.05.2017ರಲ್ಲಿ ಸರ್ಕಾರದ ಪರಿಷ್ಕೃತ ಅನುಮೋದನೆಯನ್ನು ನೀಡಿರುತ್ತದೆ. ಅದರಂತೆ, ಈ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಮೊದಲ ಕಂತಾಗಿ ರೂ.50.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ, ಬೀದರ್ ಜಿಲ್ಲೆ ಇವರಿಗೆ ಬಿಡುಗಡೆ ಮಾಡಲಾಗಿದೆ. ಈ ಕಾಮಗಾರಿಗೆ ಲೋಕೋಪಯೋಗಿ ಇಲಾಖೆ, ಬೀದರ್ ರವರಿಂದ ಎರಡು ಬಾರಿ ಟೆಂಡರ್ ಕರೆಯಲಾಗಿದ್ದು, ಈ ಎರಡು ಟೆಂಡರ್‌ಗಳಲ್ಲಿ ಅರ್ಹ ಗುತ್ತಿಗೆದಾರರು ಭಾಗವಹಿಸದ ಕಾರಣ ಸರ್ಕಾರದ ಆದೇಶ ದಿನಾಂಕ: 20.07.2019ರಲ್ಲಿ ಸದರಿ ಕಾಮಗಾರಿಯನ್ನು ಸರ್ಕಾರವು ರದ್ದುಪಡಿಸಿ ಆದೇಶಿಸಿದೆ.<br><br>**ವಿಜಯಪುರ ಕರೇಜ್:**ವಿಜಯಪುರ ನಗರದಲ್ಲಿರುವ ಪುರಾತನ ನೀರು ಸರಬರಾಜು ಯೋಜನೆ (ಕರೇಜ್) ಯನ್ನು ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸುವುದು ಹಾಗೂ ಇತರೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಕಾಮಗಾರಿಯನ್ನು ರೂ.1000.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಸರ್ಕಾರದ ಆದೇಶ ಸಂಖ್ಯೆ: ಪ್ರಇ/145/ಪ್ರವಾನಿ/2018(I), ದಿ: 30.09.2019ರಲ್ಲಿ ಮಂಜೂರಾತಿ ನೀಡಲಾಗಿದೆ. ಈ ಕಾಮಗಾರಿಗೆ ಸಂಬಂಧಿಸಿದಂತೆ, ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ, ವಿಜಯಪುರ ರವರು ವಿಜಯಪುರ ನಗರದಲ್ಲಿರುವ ಕರೇಜಿನ ಉದ್ದ ಸುಮಾರು 3-5 ಕಿ.ಮೀ. ರಷ್ಟು ವಿಸ್ತೀರ್ಣದ್ದಾಗಿದ್ದು, ಪ್ರಸ್ತುತ, ಸುಮಾರು 500 ಮೀಟರ್‌ನಷ್ಟು ಕಾಮಗಾರಿಯನ್ನು ರೂ.475.00 ಲಕ್ಷಗಳಲ್ಲಿ ಕೈಗೊಳ್ಳಲು ಸಲ್ಲಿಸಿರುವ ರೇಖಾ ಅಂದಾಜು ಪಟ್ಟಿ (Line Estimate) ಯಂತೆ ಕಾಮಗಾರಿಯನ್ನು ಕೈಗೊಳ್ಳುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ. |

**TOR 270 TDV 2022**

(ಆನಂದ್ ಸಿಂಗ್)
ಪ್ರವಾಸೋದ್ಯಮ,
ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು